ಕೊಬ್ಬರಿ ಮೆಲ್ತಾ ಲೋಕದ ಮಾತುಕತೆಯಲ್ಲಿ ತೊಡಗಿದ್ದರು.

ಇತ್ತ ರಾಮಣ್ಣನು ತನ್ನ ಇಸ್ಪೀಟು, ಓಸಿ ಆಡುವ ಪರಿವಾರವನ್ನು ಮಾತಾಡ್ಸಿತಾ ಮಾರೆಮ್ಮನ ಅರಳಿ ಕಟ್ಟೆಯ ಮೇಲೆ ಕುಳಿತು ಒಂದು ಸ್ಪೆಷಲ್ ಗಣೇಶ್ ಬೀಡಿ ಹೀರುತ್ತಾ, ಬಾಯಿ, ಮೂಗಿನಿಂದ ಹೊಗೆ ಚುಮ್ಮಿಸುತ್ತ ಗ್ರಾಮ ಪಂಚಾಯತಿ ಅಧ್ಯಕ್ಷನ ಹಾಗೆ ಮೀಸಿ ತಿರುವಿಕೊಂಡು ಠರಾವು ಪಾಸು ಮಾಡುತ್ತಾ ಕುಳಿತಿದ್ದ. ಈ ಕಿಡಿಗೇಡಿ ರಾಮಣ್ಣನದೇ ಒಂದು ಗುಂಪು. ಊರಿನ ಕುರಿತು, ದೇಶದ ಕುರಿತು, ಟಿ.ವಿ ಪೇಪರ್ ನ್ಯೂಸಿನ ಕುರಿತು ಅದರಲ್ಲೂ ಮೋದಿ ಸಾಹೇಬರ ಮನ್ ಕೀ ಬಾತ್‌ನ ಕುರಿತು ತನ್ನ ಮನದ ಮಾತೇ ಎಂಬಂತೆ ಪುಂಖಾನುಪುಂಖವಾಗಿ ಮಾತು ಉದುರಿಸುತ್ತಿದ್ದನು. ಏ...... ನೀಲವ್ವಕ್ಕ ಒಂದಿಷ್ಟು ಎಲೆ ಅಡಕೆ ಸುಣ್ಣ ಹಚ್ಚಿ ತಾರಬೇ... ಅಂತಾ ಆಕೆಯ ಎದೆಯ ಬಳಿ ಇರಿಸಿಕೊಂಡಿದ್ದ ಎಲೆ ಅಡಿಕೆ ಚೀಲವನ್ನು ಇಸಿದುಕೊಂಡು ಅರ್ಧರ್ಧ ಎಲೆ ಹಂಚಿಕೊಂಡು ಬೆಟ್ಟಡಿಕೆ ಅಲ್ಲೇ ಮಾರೆಮ್ಮನ ಅರಳಿಕಟ್ಟೆಗೆ ಕುಟ್ಟಿಕೊಂಡು, ಸುಣ್ಣ ಬೆರೆಸಿಕೊಂಡು ಮಾರೆಮ್ಮನ ಕುರಿ ರಕ್ತದ ಬಣ್ಣಕ್ಕಿಂತಲೂ ಒಂದು ಜರಾ ಹೆಚ್ಚೆಂಬಂತೆ ನಾಲಿಗೆ ಹೊರಗೆಳೆದು ನೋಡ್ತಾ, ನೀಲವ್ವಳ ಎಲೆ ಅಡಿಕೆ ಸುಣ್ಣದ ಗರಾಮತ್ತು ಪರೀಕ್ಷಿಸುತ್ತಾ ಮತ್ತೇ ಮಾತಿಗಿಳಿದಿದ್ದ.



ಅಷ್ಟೊತ್ತಿಗಾಗಲೇ ಮಾರೆಮ್ಮನ ಗುಡಿಯ ಪೂಜಾರಣ್ಣನೂ ಈ ಅರಳಿಕಟ್ಟೆಯ ರಾಮಣ್ಣನ ಗುಂಪು ಸೇರಿಕೊಂಡು ಒಂದಿಷ್ಟು ಹುಲಿಮನಿ ಚಾವಿ ಆಡುತ್ತಾ ತಾನೂ ಒಂದಚೂರು ಕೊರಿಬೀಡಿ ಜಗ್ತಾ ಸೂರ್ಯನ ಬಿಸಿಲಿನಲ್ಲಿ ತನ್ನ ಕೂದಲನ್ನು ಹರವಿ ಆರಿಸಿಕೊಳ್ತಾ, ಕಿವಿಯ ರಿಂಗ್, ಕೈ ಬಳೆ ,ಉಂಗುರವನ್ನು ಸಾವರಿಸಿಕೊಳ್ಳುತ್ತಾ ಆಟದಲ್ಲಿ ಮಗ್ನನಾಗಿದ್ದ. ಆಗಾಗ ಭಕ್ತರಲ್ಲಿ ಕೆಲವರು ಕಾಯಿ, ಕರ್ಪೂರವ ಹಚ್ಚುವ ಸಮಯ ಬಂದಾಗ ರೆಡಿಮೇಡ್ ಆಗಿ ಇರಿಸಿದ್ದ ಆರತಿ ತಟ್ಟೆಯನ್ನು ಮುಖದ ಮುಂದೊಡ್ಡಿ ಅವರಿಂದ ಭಕ್ತಿ ಪಡೆದು ಕಾಲಿಗೆ ಬೀಳುವವರನ್ನು ಬೀಳಿಸಿಕೊಂಡು ಅತ್ತಿಂದಿತ್ತ ಓಡಾಡಿಕೊಂಡಿದ್ದ.

ಮತ್ತೆ ಸಂಜೆಯಾಯಿತು. ಆವತ್ತು ಮಂಗಳವಾರ. ಅರಳಿಕಟ್ಟೆಯ ಮೇಲೆ ಚಾವಿ ಆಟ ಆಡ್ತಿದ್ದ ಪೂಜಾರಣ್ಣ ಒಮ್ಮೆಗೆ ಊರಿಗೆ ಕೇಳುವ ಹಾಗೆ ಕೇಕಿ ಹೊಡೆದು ಧಡ್ ಧಡ್ ಅಂತಾ ಕುಣಿದು ಕೂದಲು ಚೆಲ್ಲುವೊಡೆದುಕೊಂಡು ಗರ್ಭಗುಡಿಯ ಬಾಗಿಲನ್ನು ಧಡಾರ್ ಅಂತಾ ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಳ್ಳುವವನಂತೆ ಭಯ ಹುಟ್ಟಿಸಿ ಒಳಸೇರಿ ಕುಳಿತು ಬಿಟ್ಟ. ಮತ್ತೆ ಕೆಲ್ಸ ಏನೋ ಕೆಟ್ಟಿದೆ. ಯಾಕೋ ನಮ್ಮ ಪೂಜಾರಿ ನಾಗಪ್ಪಣ್ಣ ಯಡವಟ್ಟು ಮಾಡಿಕೊಂಡಂಗ ಕಾಣ್ತೆದೆ. ನಮ್ಮ ಮಾತಾಗೀನ ವಿಷಯ ಕೇಳಿ ಅದರ ಎದೆ ನಡುಗಿದೆ ಅಂತಾ ಕಾಣುತ್ತೆ. ಅಲ್ಲೇ ಯಾವತ್ತೂ ಗರ್ಭಗುಡಿಯ ಒಳಗ ಮೈದುಂಬಿ ಹೊರಗ ಬಂದು ನಿಂತದ್ದನ್ನು ಸಹಜವಾಗಿ ನೋಡ್ತಿದ್ವಿ.

ಈಗ ನೋಡಿದರ ಆಡ ಆಡ್ತಾನೇ ಎದ್ದು ಗರ್ಭಗುಡಿ ಸೇರಕಂಡದ. ಇನ್ನ ಪರೀಕ್ಷೆ ಮಾಡ್ಲೇಬೇಕು ಅಂತಾ ನಮ್ಮ ಕಿಡಿಗೇಡಿ ರಾಮಣ್ಣ ತನ್ನ ಟೀಮು ಕರೆದುಕೊಂಡು ಟ್ವೆಂಟಿ - ಟ್ವೆಂಟಿ ಮ್ಯಾಚ್ ಆಡುವವರಂತೆ ದೇವರಿಗೆ ಫೇಸ್ ಟು ಫೇಸ್ ನಿಂತೆ ಬಿಟ್ಟ! ಏ ಏನಾಗೈತೇ ನಿನಗ, ನಾವು ಕಲ್ಲಕುಂತಂಗ ಅಲ್ಲೇ ಕುಂತೇವಿ. ನಮಗ ಶಡ್ಡು ಹೊಡೆದು ಗರ್ಭಗುಡಿ ಸೇರಕೊಂಡೀ. ನಿನ್ನ ಗರ್ಭಗುಡಿ ನೋಡಿದ್ದೇನ ನಾನು. ಟಿವಿ ನೈನ್ ಅವರನ್ನ ಕರೆಸಿ ಉಗುಳಿಸಿ ಬಿಟ್ಟೇನು ಅಂತಾ ದೇವರಿಗೇ ಧಮಕಿ ಹಾಕಿ ಒಂದಿಷ್ಟು ಕೋಪದಿಂದಲೇ ಮಾತಾಡಿದ್ದ. ಆತನ ಗೆಳೆಯನೊಬ್ಬ ಸುಮ್ಮನಿರದೇ ಗರ್ಭಗುಡಿಯಾಗ ಏನಿಟ್ಟಾನ ಅಂತಾ ಗಂಟು. ಹೊರಗೆಳೀರಿ, ಗೊತ್ತಾಗ್ತದ ಬಣ್ಣ, ನಾವೆಷ್ಟು ಅಂತಾ ಸುಧಾರಿಸೋದು. ಬ್ರಾಂಡಿ ಕುಡಿಯೋ ಟೈಮಿನೊಳಗ ಹೋಗಿ ಗರ್ಭಗುಡಿಯ ಸೇರಕೊಂಡ ಬಿಡ್ತು.ಈ ಸುಡುಗಾಡಿನದು ಅಂತಾ ತನ್ನ